ಕರ್ನಾಟಕ ವಿಧಾನ ಸಭೆ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಗುರುವಾರ ದಿನಾಂಕ 22 ನೇ ಜನವರಿ 2009 ರಂದು

ಸದನವು ಬೆಳಗಾವಿಯ ಡಾ|| ಬಿ.ಎಸ್.ಜೀರಿಗೆ ಹಾಲ್, ಜೆನ್ಎಂಸಿ ಮೆಮೋರಿಯಲ್ ಆಡಿಟೋರಿಯಮ್‌ನಲ್ಲಿ ಬೆಳಗಾವಿನಲ್ಲಿ ಬೆಳಿಗ್ಗೆ 11.42 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ/ಶ್ರೀಮತಿ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

ಸದನವು ಬೆಳಿಗ್ಗೆ 11.42 ಗಂಟೆಗೆ ಸಮಾವೇಶಗೊಂಡಿತು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

1) ವಿಷಯ :- ಉತ್ತರ ಕನ್ನಡ ಜಿಲ್ಲೆಯ ಮುಂಡುಗೋಡಿನ ಟಿಬೇಟಿಯನ್ ಕ್ಯಾಂಪ್‌ನಲ್ಲಿ ಚೀನಾ ದೇಶದ ಗೂಢಚಾರರಿದ್ದಾರೆ ಎನ್ನುವ ವರದಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವ ಬಗ್ಗೆ.

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರವರು ಮಾತನಾಡಬೇಕಾಗಿದೆ. ಮಾನ್ಯ ರವಿಯವರು ಮಾತನಾಡುತ್ತಾರೆ.

**ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)** :- ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಮುಂಡುಗೋಡಿನ ಟಿಬೇಟಿಯನ್ ಕ್ಯಾಂಪ್‌ನಲ್ಲಿ ಚೀನಾ ದೇಶದ ಗೂಢಚಾರರಿದ್ದಾರೆ ಎನ್ನುವ ವರದಿ ನಿನ್ನೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ front page ನಲ್ಲಿ ವರದಿಯಾಗಿದೆ. ಹಾಗೇನಾದರೂ ಚೀನಾದ ಗೂಢಚಾರರು ಟಿಬೇಟಿಯನ್ ಕ್ಯಾಂಪ್‌ನಲ್ಲಿ ಇರುವುದು ನಿಜವಾಗಿದ್ದರೆ, ಅದು ದೇಶದ ಭದ್ರತೆಗೆ ಅತ್ಯಂತ ಅಪಾಯಕಾರಿ ಸಂಗತಿ. ಉತ್ತರ ಕನ್ನಡ ಪ್ರದೇಶ ಕೈಗಾ ಅಣುಸ್ಥಾವರ, Sea Bird

ನೆಲೆ, ಮುಖ್ಯ ವ್ಯಾಪಾರಿ ಬಂದರು ಸ್ಥಳವನ್ನು ಹೊಂದಿರುವಂತಹ ಪ್ರಮುಖ ಪ್ರದೇಶ ಹಾಗೂ ಅತ್ಯಂತ ಆಯಕಟ್ಟಿನ ಸ್ಥಳವಾಗಿದೆ. ಯಾವುದೇ ರೀತಿಯ ಅನುಮತಿ ಪತ್ರ ಇಲ್ಲದೇ, ಚೀನಾ ಗೂಢಾಚಾರರು ಟಿಬೇಟಿಯನ್ ನಿರಾಶ್ರಿತರ ಹೆಸರಿನಲ್ಲಿ, ಅಲ್ಲಿ ಬಂದು ನೆಲೆ ನಿಂತಿದ್ದಾರೆ. ತಮ್ಮ ದೇಶಕ್ಕೆ ಬೇಹುಗಾರಿಕೆ ವರದಿಯನ್ನು ಕಳುಹಿಸುತ್ತಿದ್ದಾರೆ ಎನ್ನುವ ವರದಿ ಅತ್ಯಂತ ಆಘಾತಕಾರಿ ಸಂಗತಿ. ಇದನ್ನು ನಿಯಂತ್ರಣ ಮಾಡುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು, ಬಿಗಿ ನಿಲುವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಈಗಾಗಲೇ ನಮಗೆ ಗೊತ್ತಿರುವ ಹಾಗೆ, ಪಾಕಿಸ್ಥಾನಿ ಭಯೋತ್ಪಾದನಾ ಸಂಘಟನೆಗಳು ಏನಿವೆ ಜೈಷ್-ಎ-ಮೊಹಮದ್ ಮತ್ತು ಲಷ್ಕರ್-ಎ-ತೊಯ್ಬಾ ಈ ರೀತಿಯ ಸಂಘಟನೆಗಳಿಗೆ, ಚೀನಾದ ಗೂಢಾಚಾರರು, ಭಾರತದಲ್ಲಿ ಆಂತರಿಕ ಸಂಘರ್ಷವನ್ನು ಹುಟ್ಟು ಹಾಕುವುದಕ್ಕೆ ಇಲ್ಲಿ ಪ್ರಚೋದನೆ ಕೊಡುತ್ತಿರುವ ಸಂಗತಿ ಜಗಜ್ಜಾಹೀರು ಆಗಿರುವಂತಹ ಸಂಗತಿ. ನೇಪಾಳದಲ್ಲಿ ಆಂತರಿಕವಾಗಿ ಗಲಭೆಯನ್ನು ಹುಟ್ಟುಹಾಕಿ, ಚೀನಾ ಬೆಂಬಲಿತ ಸರ್ಕಾರ ಅಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಹೇಗೆ ಕಾರಣವಾಯಿತು ಎನ್ನುವುದನ್ನು ನಾವು ಕಂಡಿದ್ದೇವೆ. ನಕ್ಸಲ್ ಚಳವಳಿಗೆ ಇಂಬು ಕೊಡುತ್ತಿರುವುದನ್ನು ನಾವು ಕಂಡಿದ್ದೇವೆ. ಚೀನಾ ದೇಶದಿಂದ ಪ್ರೇರಣೆ ಪಡೆದಿರುವಂಥ ನಕ್ಸಲ್ ಯುವಕರಿಗೆ ಪರೋಕ್ಷವಾಗಿ ಚೀನಾ ದೇಶ ಬೆಂಬಲ ಕೊಡುತ್ತಿರುವುದನ್ನು ನಾವು ಕಂಡಿದ್ದೇವೆ. ಹೀಗೆ ನಾಳೆ ಅಪಾಯ ಒದಗುವ ಸ್ಥಿತಿ ಇರುವುದರಿಂದ, ಈ ಪತ್ರಿಕೆಯಲ್ಲಿ ಬಂದಿರುವ ವರದಿ ನಿಜವೇ? ನಿಜವೇ ಆಗಿದ್ದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

**2) ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ಮೆಕ್ಕೆಜೋಳ ಖರೀದಿಯಲ್ಲಿ ಉದ್ಭವಿಸಿರುವ ಸಮಸ್ಯೆ ಬಗ್ಗೆ.**

**ಅಧ್ಯಕ್ಷರು** :- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)** :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಈ ವಿಷಯದ ಬಗ್ಗೆ ಮಾಹಿತಿ ಇರಬಹುದು ಎಂದು ನಾನು ಭಾವಿಸಿದ್ದೇನೆ. ಇದು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ವಿಚಾರ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಈ ಮೆಕ್ಕೆಜೋಳ ಖರೀದಿ ಬಗ್ಗೆ ಸಾಕಷ್ಟು ಗದ್ದಲ ಅಲ್ಲಿ ಉಂಟಾಗಿದೆ. ಕಾರಣವೇನೆಂದರೆ, ನಿಮಗೆ ಗೊತ್ತಿರುವ ಹಾಗೆ, ಸುಮಾರು 62,000 ಹೆಕ್ಟೇರ್‌ನಲ್ಲಿ ನಿಮ್ಮ ಸರ್ಕಾರ ನಿಗದಿಪಡಿಸಿರುವಂಥ ದರ ಏನಿದೆ, ಆ ದರದಲ್ಲಿ